

ನಸುಕಿನ ಐದೂವರೆಗೆ ದೀನಪ್ರಸಾದ್ ಎದ್ದುಬಿಡುತ್ತಾರೆ. ಎದ್ದವರು ಒಂದು ಕಾಫಿ ಕುಡಿಯುತ್ತಾರೆ. ಟಾಯ್ಲೆಟ್ಟಿಗೆ ಹೋಗಿ ಬರುವಾಗ ಆರಾಗಿರುತ್ತದೆ. ಬಾಗಿಲೆರೆಸಿಕೊಂಡು ರಸ್ತೆಗಿಳಿಯುತ್ತಾರೆ. ಮುಂಜಾನೆ ವಾಕಿಂಗ್ ಹೋಗುವುದು ಕೂಡ ಗಣ್ಯ ಮನುಷ್ಯರ ಒಂದು ಲಕ್ಷಣ ಅಂತ ಅವರಿಗನಿಸಿದ ಮೇಲೆ ಈ ಅಭ್ಯಾಸ ಮಾಡಿಕೊಂಡಿದ್ದಾರೆ. ಬಿಳಿಯ ಸಡಿಲ ಪ್ಯಾಂಟು, ಅದರ ಮೇಲೆ ಬಿಳಿಯ ಜುಬ್ಬಾ. ಚಳಿಯಿದ್ದರೆ ಬೂದುಬಣ್ಣದ ಉಣ್ಣೆಯ ಜಾಕೆಟ್ ಹಾಕಿ ತಲೆಗೆ ಉಣ್ಣೆಯ ಟೋಪ್ಪಿ ಹಾಕಿರುತ್ತಾರೆ. ಇದು ಅವರನ್ನು ನಾಕು ಜನರಲ್ಲಿ ಬೇರೆಯಾಗಿ ತೋರಿಸುತ್ತದೆ. ಹಾಗೆ ಆಗಬೇಕು ಅಂತಲೆ ಅವರು ಆರಿಸಿಕೊಂಡದ್ದು ಮತ್ತು ಅದನ್ನೇ ಧರಿಸುವ ಶಿಸ್ತನ್ನು ಪಾಲಿಸುವುದು. ಫ್ರೆಂಡ್ಸ್ ಕಾಲನಿಯಲ್ಲಿ 100X80ರ ಸೈಟಿನಲ್ಲಿ ಕಟ್ಟಿದ ಮನೆ ಅವರದು. ಆ ಬಡಾವಣೆಯಲ್ಲೆಲ್ಲ ಇಂತಹ ಜೋರಿನ ಮನೆಗಳೆ ಇರುವುದು. ಆದರೆ, ಇವರ ವಿಶೇಷ ವಿನ್ಯಾಸ, ಮನೆಯ ಎರಡೂ ಕಡೆ ಹೂವಿನ ಗಿಡಗಳು ಹುಲ್ಲುಹಾಸು ಮತ್ತು ಮನೆಯೆದುರಿನ ಪೋರ್ಟಿಕೋದಿಂದಾಗಿ ದಾರಿಯಲ್ಲಿ ಹೋಗುವವರ ಕಣ್ಣು ಸೆಳೆಯುತ್ತದೆ. ಅವರ ಬೂದು ಬಣ್ಣದ ಸೆಡಾನ್ ಕಾರನ್ನು ಯಾವಾಗಲೂ ಪೋರ್ಟಿಕೋದಲ್ಲೆ ನಿಲ್ಲಿಸುತ್ತಿದ್ದರು. ಒಂದು ರಾತ್ರಿ ಯಾರೋ ಕಿಡಿಗೇಡಿಗಳು ಕಲ್ಲು ಹೊಡೆದು ಗಾಜು ಒಡೆಯಿತು. ಆಗಿಂದ ರಾತ್ರಿ ಶಟರ್ ಇರುವ ಪಾರ್ಕಿಂಗ್‌ನಲ್ಲಿ ಹಾಕುತ್ತಾರೆ. ಕಾಂಪೌಂಡ್ ಗೋಡೆಗೆ ಅಂಟಿಸಿದ ಕಪ್ಪು ಗ್ರಾನೈಟಿನಮೇಲೆ ಬರೆದಿದೆ: ಡಾ. ದೀನಪ್ರಸಾದ್, ಎಂ.ಎ., ಪಿಎಚ್.ಡಿ.

ನಿವೃತ್ತಿಯ ಮೊದಲು ಅವರು ವಾಕಿಂಗ್ ಹೋಗುತ್ತಿರಲಿಲ್ಲ. ರಾತ್ರಿ ತುಂಬಾಹೊತ್ತು ಪೇಪರುಗಳನ್ನು ತಿದ್ದುವುದು, ಲೇಖನಗಳನ್ನು ತಯಾರು ಮಾಡುವುದು, ಪುಸ್ತಕಗಳಿಗೆ ವಿಮರ್ಶೆ ಬರೆಯುವುದು ಹೀಗೆ ಏನೇನೊ ಕೆಲಸಗಳಲ್ಲಿ ವ್ಯಸ್ತರಾಗಿರುತ್ತಿದ್ದರು. ಏಳುವುದು ತಡವಾಗುತ್ತಿತ್ತು. ಯೂನಿವರ್ಸಿಟಿ ಕ್ಯಾಂಪಸ್ಸಿನಲ್ಲಿ ಓಡಾಡತಿರತೀನಿ, ಅಲ್ಲೇ ಸಮಾ ವಾಕಿಂಗಾಗತಿರತ್ತೆ ಅನ್ನುತ್ತಿದ್ದರು. ಇವರ ಪತ್ನಿ ತಾಪಸಿಯದೂ ಸ್ಥೂಲಕಾಯ. ಆರಕ್ಕೆಲ್ಲ ಎದ್ದು, ಚಡಪಡಿಸುತ್ತಿರುವ ಡಾನ್ ಸರಪಳಿ ಹಿಡಿದು ಕಾಲನಿಯ ಸ್ನೇಹಿತರ ಜೊತೆ ಪಾರ್ಕಿನ ಸುತ್ತ ಓಡಾಡುವುದಕ್ಕಿಂತ ಜಾಸ್ತಿ ಹರಟೆಯಲ್ಲಿ ಸುದ್ದಿ ವಿನಿಮಯ ಮಾಡಿಕೊಂಡು ಏಳಕ್ಕೆ ವಾಪಸು ಬಂದು ತಿಂಡಿ ತಯಾರುಮಾಡಿ ನಿದ್ದೆಯಲ್ಲಿರುತ್ತಿದ್ದ ಪ್ರೊಫೆಸರರನ್ನು ಎಬ್ಬಿಸುತ್ತಿದ್ದರು. ಗುಡಿಸುವುದು, ಪಾತ್ರೆ ತೊಳೆಯುವುದು ಮಾಡಲು ಕೆಲಸದವಳು ಬರುತ್ತಾಳೆ. ಗಂಡ ಯೂನಿವರ್ಸಿಟಿಗೆ ಹೋದರೆಂದರೆ ಮತ್ತೆ ಸಂಜೆಯವರೆಗೆ ತಮಗೆ ಬೇಕಾದಹಾಗಿರಬಹುದು. ಪ್ರೊಫೆಸರು ರಾತ್ರಿ ಕೆಲಸ ಮಾಡುವಾಗ ಕಾಫಿಗೆ ಬೇಡಿಕೆ ಬರುತ್ತಿತ್ತಲ್ಲದೆ, ಪೇಪರೊ ಪುಸ್ತಕವೊ ಸಿಗದೆ ಪರದಾಡುತ್ತ ಹೆಂಡತಿಯನ್ನು ಆಗಾಗ ಕರೆಯುವುದು ಅವರ ಅಭ್ಯಾಸಗಳಲ್ಲೊಂದಾಗಿತ್ತು. ನಿವೃತ್ತಿಯಾದ ಮೇಲೆ ಇನ್ನು ಪರವಾಗಿಲ್ಲ ಅಂದುಕೊಂಡಿದ್ದರು. ಬೆಳಗ್ಗೆ ಎಂಟುಗಂಟೆಗೆ ತಿಂಡಿ ಕಾಫಿ ಕೊಟ್ಟರಾಗಿತ್ತು. ಆದರೀಗ ಬೆಳಗ್ಗೆ ವಾಕಿಂಗ್ ಶುರು ಮಾಡಿದ ಮೇಲೆ ಐದೂವರೆಗೇ ಕಾಫಿಗೆ ಬೇಡಿಕೆ ಬರತೊಡಗಿತ್ತು. ಎಲೆಕ್ಟ್ರಿಕ್ ಕಾಫಿ ಮೇಕರ್